**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.** DW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 27.07.2024
ಪಾಟಿ ಸವಾಲು : ವಾದಿ ಪರ ವಕೀಲರಿಂದ

ಚಿಕ್ಕ ಮಾದಪ್ಪ ರವರಿಗೆ ಮುದ್ದು ಮಾದಪ್ಪ ಮತ್ತು ಭುಜುಂಗಪ್ಪ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ಚಿಕ್ಕ ಮಾದಪ್ಪ ನವರು ತೀರಿಕೊಂಡ ನಂತರ ಅವರ ಮಕ್ಕಳುಗಳು ಪಿತ್ರಾರ್ಜಿತ ಸ್ವತ್ತುಗಳನ್ನು ಭಾಗ ಮಾಡಿಕೊಂಡು ಅವರವರಿಗೆ ಸೇರಿದ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲವೆಂದು ನುಡಿಯುತ್ತಾರೆ.

ಮುದ್ದು ಮಾದಪ್ಪ ಮತ್ತು ಭುಜಂಗಪ್ಪ ನವರು ಊರಿನ ಹಿರಿಯರ ಸಮಕ್ಷಮ ಸ್ವತ್ತುಗಳನ್ನು ಮೌಖಿಕವಾಗಿ ಭಾಗ ಮಾಡಿಕೊಂಡು ಅವರವರಿಗೆ ಸೇರಿದ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿದ್ದು ಈ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಅವರವರಿಗೆ ಬಂದಿರುವ ಸ್ವತ್ತುಗಳಿಗೆ ಸಂಬಂಧಿಸಿದಂತೆ ಮುದ್ದು ಮಾದಪ್ಪ ಮತ್ತು ಭುಜಂಗಪ್ಪ ರವರ ಹೆಸರುಗಳಿಗೆ ಪಂಚಾಯಿತಿ ದಾಖಲೆಗಳು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಮುದ್ದು ಮಾದಪ್ಪ ಮತ್ತು ಭುಜಂಗಪ್ಪ ರವರಿಗೆ ಬಂದಿರುವ ಸ್ವತ್ತುಗಳ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ವಾದಿಯರು ಯಾವ ಸ್ವತ್ತಿನ ಮೇಲೆ ದಾವೆ ಹಾಕಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣ ದಾಖಲು ಮಾಡಿರುವ ಸ್ವತ್ತಿನ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನಾನು ಬೇರೆ ಯಾವುದೇ ಅಸಲು ದಾವೆಯನ್ನು ಹಾಕಿರುವುದಿಲ್ಲ. ಸ.ನಂ.94 ರಲ್ಲಿ ಒಟ್ಟು 3 ಎಕರೆ 37 ಗುಂಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 3 ಎಕರೆ 37 ಗುಂಟೆ ಜಮೀನಿನ ಪೈಕಿ 2 ಎಕರೆ 25 ಗುಂಟೆ ಜಮೀನು ಭುಜಂಗಪ್ಪ ನವರ ಸ್ವಾಧೀನದಲ್ಲಿ ಹಾಗೂ 1 ಎಕರೆ 12 ಗುಂಟೆ ಜಮೀನು ಮುದ್ದು ಮಾದಪ್ಪ ರವರ ಸ್ವಾಧೀನದಲ್ಲಿರುತ್ತದೆ ಎಂದರೆ ಸಾಕ್ಷಿಯು ಗೊತ್ತಿಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 1 ಎಕರೆ 20 ಗುಂಟೆ ಜಮೀನನ್ನು ಭುಜಂಗಪ್ಪ ರವರು ಮುಂದೆ ನಿಂತುಕೊಂಡು ಮುದ್ದು ಮಾದಪ್ಪ ರವರ ಮುಖಾಂತರ ಕ್ರಯಪತ್ರವನ್ನು ನನಗೆ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ.

ಭುಜಂಗಪ್ಪ ರವರಿಗೆ ಬಂದಿದ್ದ 2 ಎಕರೆ 25 ಗುಂಟೆ ಜಮೀನಿನಲ್ಲಿ ಮರಿಸ್ವಾಮಪ್ಪ ರವರು 1 ಎಕರೆ 16 ಗುಂಟೆ ಜಮೀನಲ್ಲಿ ಹಾಗೂ ಶಿವನಂಜಪ್ಪ ರವರು 1 ಎಕರೆ 9 ಗುಂಟೆ

ಜಮೀನಿನ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ವಾದಿಯರ ಜಮೀನಿಗೂ ಹಾಗೂ ನಿಮಗೂ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸಾಕ್ಷಿಯು ತಕರಾರು ಇಲ್ಲವೆಂದು ನುಡಿಯುತ್ತಾರೆ. ನನ್ನ ಜಮೀನಿನ ಸ.ನಂ.94 ಇರುತ್ತದೆ ಅದರ ಹಿಸ್ಸೆ ಗೊತ್ತಿರುವುದಿಲ್ಲ.

ಸ.ನಂ.94/2 ಮರಿಸ್ವಾಮಪ್ಪ ರವರಿಗೆ ಸೇರಿದ್ದು ಅದೇ ರೀತಿ ಸ.ನಂ.94/3 ಶಿವನಂಜಪ್ಪ ರವರಿಗೆ ಸೇರಿದ್ದು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸ.ನಂ.94 ರಲ್ಲಿ ನಿಮಗೆ ಜಮೀನು ಇರುತ್ತದೆ ಎಂದು ತಿಳಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಅರ್ಜಿ ನೀಡಿ ಅಳತೆ ಮಾಡಿಸಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ನಿಮ್ಮ ಜಮೀನಿನ ಚೆಕ್ಕು ಬಂದಿ ಹೇಳಲು ಆಗುತ್ತದೆಯೇ ಎಂಬ ಪ್ರಶ್ನೆಗೆ ಸಾಕ್ಷಿಯು ಆಗುತ್ತದೆ ಎಂದು ನುಡಿಯುತ್ತಾರೆ. ಪೂರ್ವ- ಪುಟ್ಟಸ್ವಾಮಿಗೌಡ ಜಮೀನು, ಪಶ್ಚಿಮ- ಮರಿಸ್ವಾಮಪ್ಪ ತಂದೆ ಭುಜಂಗಪ್ಪ ಜಮೀನು, ಉತ್ತರ- ಚುಂಚೇಗೌಡರ ಜಮೀನು, ದಕ್ಷಿಣ- ಪುಟ್ಟಸ್ವಾಮಿಗೌಡ ಜಮೀನು ಇರುತ್ತದೆ.

ಪುಟ್ಟಸ್ವಾಮಿಗೌಡರವರಿಗೂ, ಚುಂಚೇಗೌಡರಿಗೂ ಹಾಗೂ ನನಗೂ ಯಾವುದೇ ದ್ವೇಷ ಇರುವುದಿಲ್ಲ ಎಂದರೆ ಸರಿ.

(ಈ ಹಂತದಲ್ಲಿ ಮಾನ್ಯ ವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.